## 45. ಲೇಟ್ ರಿಟರ್ನ್ಸ್ ಫೀನಿಂದ ವಿನಾಯ್ತಿ

ಕಳೆದ 3 ವರ್ಷಗಳಿಂದಲೂ ಜಿಎಸ್‌ಟಿ ಪಾವತಿಸದ ಉದ್ಯಮಗಳಿಗೆ ಕೇಂದ್ರ ಸರ್ಕಾರ ರಿಲೀಫ್ ನೀಡಿದೆ. ಅಂದರೆ, 2017ರ ಜುಲೈನಿಂದ 2020 ಜನವರಿ ಅವಧಿಯಲ್ಲಿ ಯಾರು ರಿಟರ್ನ್ಸ್ ಸಲ್ಲಿಕೆ ಮಾಡಿಲ್ಲವೋ ಅವರು, ಇದೇ ಜುಲೈ 1ರಿಂದ ಆರಂಭಗೊಂಡು ಆಗಸ್ಟ್ 30ರ ಅವಧಿಯಲ್ಲಿ ರಿಟರ್ನ್ಸ್ ಸಲ್ಲಿಸಬಹುದಾಗಿದೆ. ಇವರಿಗೆ ಲೇಟ್ ರಿಟರ್ನ್ಸ್ ಫೀನಿಂದ ವಿನಾಯ್ತಿ ನೀಡಲಾಗುತ್ತದೆ ಬಾಕಿ ತೆರಿಗೆ ಮೇಲಿನ ಬಡ್ಡಿಯನ್ನೂ ಮನ್ನಾ ಮಾಡಲಾಗುತ್ತದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಕೇಂದ್ರ ವಿತ್ತ ಸಚಿವೆ ಅವರ ನೇತೃತ್ವದಲ್ಲಿ ನಡೆದ ಜಿಎಸ್‌ಟಿ 40ನೇ ಸಭೆಯಲ್ಲಿ ಈ ಕುರಿತಂತೆ ನಿರ್ಧಾರ ಕೈಗೊಳ್ಳಲಾಗಿದೆ. ಕೆಲವು ವಸ್ತುಗಳ ಮೇಲಿನ ಜಿಎಸ್‌ಟಿ ಏರಿಕೆ ಮಾಡುವ ಪ್ರಸ್ತಾಪವನ್ನು ಮುಂದೂಡಿಕೆ ಮಾಡಲಾಗಿದೆ. 'ಜಿಎಸ್‌ಟಿಆರ್–3ಬಿ' ಅರ್ಜಿಯ ಮೂಲಕ ರಿಟರ್ನ್ಸ್ ಸಲ್ಲಿಸದವರಿಗೆ ವಿಧಿಸುವ ದಂಡವನ್ನು ರೂ.500ಗಳಿಗೆ ಮಿತಿಗೊಳಿಸಲಾಗಿದೆ.

**ದಂಡ ಪ್ರಮಾಣ ಇಳಿಕೆ:** ಇನ್ನು ತೆರಿಗೆ ಸಲ್ಲಿಸದಿರುವ ವಾರ್ಷಿಕ ರೂ.5 ಕೋಟಿ ವಹಿವಾಟು ನಡೆಸುವ ಕಂಪೆನಿಗಳಿಗೂ ಹೊಸ ಅವಕಾಶ ಕಲ್ಪಿಸಲಾಗಿದೆ. ಫೆಬ್ರವರಿ, ಮಾರ್ಚ್, ಏಪ್ರಿಲ್‌ನಲ್ಲಿ ತೆರಿಗೆ ರಿಟರ್ನ್ಸ್ ಸಲ್ಲಿಸದೇ ಇರುವ ಈ ಕಂಪೆನಿಗಳು ಸೆಪ್ಟೆಂಬರ್ 30ರೊಳಗೆ ರಿಟರ್ನ್ಸ್ ಸಲ್ಲಿಸಿದರೆ ಅವುಗಳ ಮೇಲೆ ಯಾವಾಗಲೂ ದಂಡ ವಿಧಿಸಲಾಗುತ್ತಿದ್ದ 'ಲೇಟ್ ರಿಟರ್ನ್ಸ್' ದಂಡವನ್ನು ಶೇ.18ರಿಂದ ಶೇ.9ಕ್ಕೆ ಇಳಿಸಲಾಗಿದೆ. ಮತ್ತೊಂದೆಡೆ ಜುಲೈ 31ರವರೆಗೆ ರದ್ದಾಗಿದ್ದ ಜಿಎಸ್‌ಟಿ ನೋಂದಣಿಗಳ ರಿಜಿಸ್ಟ್ರೇಷನ್ ಮರುಚಾಲನೆ ನೀಡಲಾಗಿದ್ದು, ಆ ಕುರಿತಾಗಿ ಅರ್ಜಿ ಸಲ್ಲಿಸುವವರಿಗೆ ಸೆಪ್ಟೆಂಬರ್ 30ರವರೆಗೆ ಕಾಲಾವಕಾಶ ನೀಡಲಾಗಿದೆ.

**ಜಿಎಸ್‌ಟಿ ಪರಿಹಾರ ಧನ:** ಈ ನಡುವೆ ಲಾಕ್‌ಡೌನ್‌ನಿಂದಾಗಿ ಜಿಎಸ್‌ಟಿ ಆದಾಯ ಗಣನೀಯವಾಗಿ ಇಳಿಕೆಯಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ಮರು ವಿತರಣೆಯಾಗಬೇಕಿರುವ ಜಿಎಸ್‌ಟಿ ಪರಿಹಾರ ಧನದ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲು ಜುಲೈನಲ್ಲಿ ಪ್ರತ್ಯೇಕವಾಗಿ ಜಿಎಸ್‌ಟಿ ಮಂಡಳಿ ಸಭೆ ನಡೆಸಲಾಗುತ್ತದೆ ಎಂದು ಕೇಂದ್ರ ಹಣಕಾಸು ಸಚಿವೆ ತಿಳಿಸಿರುತ್ತಾರೆ.

ಆಧಾರ:ಉದಯವಾಣಿ, ದಿನಾಂಕ: 13.06.2020